# ‘ಕಾಮಿಡಿಯನ್ ಆದರೂ ನೆಗೆಟಿವ್ ಪಾತ್ರವೇ ಇಷ್ಟ

ಪ್ರಶಾಂತ್ ಉದಯದ ‘ಗಂಗೆಗೌರಿ’ ದಿನಕರ



◆ **ದಿನಕರ್ ಪಾತ್ರ ನಿಮಗೆ ಹೇಗೆನಿಸುತ್ತಿದೆ?**

ಕೆಲಸ ಕಾರ್ಯ ಇಲ್ಲದ ವ್ಯಕ್ತಿಯಾಗಿದ್ದೇನೆ. ಮನೆ ಅಳಿಯನಾಗಿ, ಕಚೇರಿಗೆ ಹೋಗಿ ಬರುವುದೂ ಅಲ್ಲದೆ ಮನೆಯಲ್ಲಿ ಏನಾದರೂ ಸಹಾಯ ಮಾಡಬೇಕು. ನನ್ನ ಬೇಜವಾಬ್ದಾರಿತನಕ್ಕೆ ಮೇಲಿಂದ ಮೇಲೆ ಬೈಯಿಸಿಕೊಳ್ಳುತ್ತಿರುತ್ತೇನೆ. ಹೆಂಡತಿಯ ಹತ್ತಿರ ಹೀಯಾಳಿಕೆಗೆ ಒಳಗಾದರೂ ಗಂಗೆಯ ಬೆಂಬಲಕ್ಕೆ ನಿಲ್ಲುತ್ತೇನೆ. ನನ್ನ ಹೆಂಡತಿ ನೆಗೆಟಿವ್ ಗುಣದವಳು. ಕಥೆ ಮಾತ್ರ ಕಾಮಿಡಿ ಟ್ರ್ಯಾಕ್‌ನಲ್ಲೇ ಸಾಗುತ್ತಿದೆ.

◆ **ನೀವು ಎಂತಹ ಪಾತ್ರವನ್ನು ಎಂಜಾಯ್ ಮಾಡ್ತೀರಿ?**

‘ಸಿಲ್ಲಿಲಲ್ಲಿ’ಯಲ್ಲಿ ನಟಿಸಿದ ನಂತರ ನನಗೆ ಕಾಮಿಡಿ ಅನ್ನುವುದು ಟ್ಯಾಗ್ ಆಯಿತು. ‘ನಾಟ್ಯರಾಣಿ ಶಾಂತಲಾ’ದಲ್ಲಿ ಗಂಭೀರ ಪಾತ್ರವನ್ನೇ ಮಾಡಿದ್ದೆ. ‘ಕಸ್ತೂರಿ ನಿವಾಸ’ ಮತ್ತು ‘ವಠಾರ’ದಲ್ಲಿ ನೆಗೆಟಿವ್ ಪಾತ್ರವನ್ನು ನಿರ್ವಹಿಸಿದ್ದೆ. ‘ಮಿಂಚು’ನಲ್ಲಿ ಸಾಮಾಜಿಕ ಕಳಕಳಿಯ ಪಾತ್ರವನ್ನೂ ಮಾಡಿದ್ದೇನೆ. ವೈಯಕ್ತಿಕವಾಗಿ ನನಗೆ ನೆಗೆಟಿವ್ ಪಾತ್ರಗಳನ್ನು ನಿರ್ವಹಿಸುವ ಬಗ್ಗೆ ಆಸಕ್ತಿ ಹೆಚ್ಚೇ ಇದೆ. ಕಾಮಿಡಿ ರಂಗದಲ್ಲಿ ನನಗೆ ಐಡೆಂಟಿಟಿ ಸಿಕ್ಕಿದೆ ಹಾಗಾಗಿ ಅದು ಹಾಗೇ ನಡೀತಾ ಇದೆ. ಎಂಜಾಯ್ ಮಾಡಿಕೊಂಡು ಹೋಗುತ್ತಿದ್ದೇನೆ. ಏಕೆಂದರೆ ನನಗೆ ನಟನೆ ಅನ್ನುವುದು ಪ್ಯಾಷನ್ ಅದನ್ನು ಇಷ್ಟಪಟ್ಟು ಮಾಡುತ್ತಿದ್ದೇನೆ.

◆ **ನಟನೆಯ ಜೊತೆ ಮತ್ತೆ ಇನ್ನೇನು ಮಾಡುತ್ತೀರಿ?**

ಎಂಜಿನಿಯರಿಂಗ್ ಮಾಡಿಕೊಂಡು ನಟನೆಗೆ ಬಂದಿದ್ದೇನೆ. ಪಿಯು ಮುಗಿದ ನಂತರ ‘ಕಲಾಗಂಗೋತ್ರಿ’ಯಲ್ಲಿ ರಂಗಚಟುವಟಿಕೆಯನ್ನು ಆರಂಭಿಸಿದೆ. ಬಿಇ ಮುಗಿದ ನಂತರ ಪ್ರದರ್ಶನ ಕಲೆಗೆ ಸಂಬಂಧಿಸಿದಂತೆ ಲಂಡನ್‌ನಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡಿದೆ. ಅಲ್ಲಿ ಅಭ್ಯಾಸ ಮಾಡುವ ಜೊತೆ ಕೆಲಸ ಮಾಡುವ ಅವಕಾಶವೂ ಸಿಕ್ಕಿತು. ಹಾಗಾಗಿ ಬಿಬಿಸಿ ಸೇರಿದಂತೆ ಬೇರೆ ಬೇರೆ ಸಂಸ್ಥೆಗಳಲ್ಲಿ ಐದು ವರ್ಷ ಕೆಲಸ ಮಾಡಿದೆ. ಬೆಂಗಳೂರಿಗೆ ವಾಪಸ್ ಬಂದ ನಂತರ ಅಕಾಡೆಮಿ ಮಾಡಿದ್ದೇನೆ. ನಾನು ಮತ್ತು ರೂಪ ಇಬ್ಬರು ಸೇರಿ ಹೊಸ ಕಲಾವಿದರಿಗೆ ಸ್ಕ್ರಿಪ್ಟ್ ಆಧಾರಿತ ತರಬೇತಿಯನ್ನು ನೀಡುತ್ತೇವೆ. ‘ಡೈರೆಕ್ಟರ್ ಫಾರ್ ಆಕ್ಟರ್’ ಪರಿಕಲ್ಪನೆಯಲ್ಲಿ ನಟರನ್ನು ತಯಾರಿ ಮಾಡುತ್ತೇವೆ. ಹೊಸ ಕಲಾವಿದರ ಸಿನಿಮಾಗಳ ದೃಶ್ಯಗಳನ್ನು ಇಟ್ಟುಕೊಂಡು ಹಂತ ಹಂತವಾಗಿ ತರಬೇತಿಯನ್ನು ಕೊಡುತ್ತೇವೆ. ಇದಲ್ಲದೆ ನಿರ್ದೇಶನ ಕ್ಷೇತ್ರದಲ್ಲಿಯೂ ಕೆಲಸ ಮಾಡುತ್ತಿದ್ದೇನೆ. ಯೂಟ್ಯೂಬ್ ಚಾನಲ್ ನಿರ್ವಹಿಸುತ್ತಿದ್ದೇನೆ.

◆ **ಯೂರೋಪ್ ಪ್ರದರ್ಶನ ಕಲೆಯ ನಿರ್ಮಾಣಕ್ಕೆ ಹೋಲಿಸಿದರೆ ಭಾರತೀಯ ಪ್ರಾದೇಶಿಕ ನಿರ್ಮಾಣಗಳು ಹೇಗಿವೆ?**

ಒಂದೊಂದು ಪ್ರದೇಶದಲ್ಲಿಯೂ ಕೆಲಸ ಮಾಡುವ ಕ್ರಮ ಭಿನ್ನವಾಗಿರುತ್ತದೆ. ಅದರಲ್ಲಿ ಒಂದಿಷ್ಟು ಅಂಶ ಕೆಲವು ಕಡೆ ಸರಿ ಅನ್ನಿಸಬಹುದು. ಇಲ್ಲವೇ ತಪ್ಪು ಎಂದೂ ಅನ್ನಿಸಬಹುದು. ಯೂರೋಪಿನಲ್ಲಿ ಸಣ್ಣ ಸಣ್ಣ ಸಂಗತಿಯನ್ನೂ ತುಂಬ ಗಂಭೀರವಾಗಿ ತೆಗೆದುಕೊಳ್ಳುತ್ತಾರೆ. ಡಿಟೇಲ್ ಆಗಿ ವರ್ಕ್ ಮಾಡುತ್ತಾರೆ. ಒಂದು ನಾಟಕ ತೆಗೆದುಕೊಂಡರೆ ಅಲ್ಲಿಯ ಅಗತ್ಯ ಅಂಶಗಳಿಗೆಲ್ಲ ಸಿದ್ಧತೆಯನ್ನು ಮಾಡಿಕೊಂಡಿರುತ್ತಾರೆ. ಸಣ್ಣ ಸಣ್ಣ ಪಾತ್ರ ನಿರ್ವಹಿಸುವವರಿಗೂ ಸಂಪೂರ್ಣ ಸ್ಕ್ರಿಪ್ಟ್ ಕೊಟ್ಟಿರುತ್ತಾರೆ. ಅದನ್ನು ಅವರು ಪೂರ್ಣ ಓದಿಕೊಂಡು ಬಂದಿರುತ್ತಾರೆ. ಅಂದರೆ ಪ್ರತಿಯೊಬ್ಬರಿಗೂ ಆ ಶೋ ಬಗ್ಗೆ ಸ್ಪಷ್ಟ ಚಿತ್ರಣ ಇರುತ್ತದೆ. ಇದೆಲ್ಲ ನೋಡಿದಾಗ ಅಬ್ಬಾ ಅನ್ನಿಸದೆ ಇರದು. ಆದರೆ, ಅವರು ತಕ್ಷಣದ ಬದಲಾವಣೆಗೆ ಹೊಂದಿಕೊಳ್ಳುವುದು ಕಷ್ಟ. ನಮ್ಮಲ್ಲಿ ನಾಟಕ ಮಾಡುವ ಜೊತೆ ಬೇರೆ ಸಾಧ್ಯತೆಗಳಿಗೂ ಸಿದ್ಧರಿರುತ್ತೇವೆ. ಬದಲಾವಣೆಗೂ ರೆಡಿ ಇರುತ್ತೇವೆ. ಹೊಂದಾಣಿಕೆಯನ್ನು ಸುಲಭವಾಗಿ ತೆಗೆದುಕೊಳ್ಳುತ್ತೇವೆ. ಹಾಗೆಯೇ ತಂಡದ ಪ್ರತಿಯೊಬ್ಬರೂ ಸ್ಕ್ರಿಪ್ಟ್ ಓದಿ ಸಿದ್ಧರಾಗಿ ಬರುವಮಟ್ಟಿಗೆ ನಾವು ಬೆಳವಣಿಗೆ ಆಗಿಲ್ಲ. ಹಾಗೆ ನೋಡಿದರೆ, ನಮ್ಮದೇ ಚಂದ. ನಾನು ನಾಟಕ ಮಾತ್ರ ಅಲ್ಲ ನಿರೂಪಣೆ, ಸಿನಿಮಾ, ಸೀರಿಯಲ್ ಮಾಡುವುದರ ಜೊತೆ ನಿರ್ದೇಶನವನ್ನೂ ಮಾಡುತ್ತೇನೆ, ತರಬೇತಿಯನ್ನೂ ನೀಡುತ್ತೇನೆ. ಅಲ್ಲಿ ಹಾಗಲ್ಲ ಡ್ರಾಮಾ ಆರ್ಟಿಸ್ಟ್ ಡ್ರಾಮಾ ಆರ್ಟಿಸ್ಟ್, ಕಿರುತೆರೆಯ ಕಲಾವಿದ ಕಿರುತೆರೆಗೇ ಸೀಮಿತವಾಗಬೇಕಾಗುತ್ತದೆ. ಸ್ಥಿತಿಸ್ಥಾಪಕಗುಣ ನಮ್ಮಲ್ಲಿ ಹೆಚ್ಚಿದೆ.

■ **ರಾಘವೇಂದ್ರ ಕೆ.**